

# ಸರೋವರಗಳ ನಗರ ಉದಯಪುರ

ಪ್ರವಾಸಿಗರಿಗೆ ರಸದೌತಣ ಉಣಬಡಿಸುವ ಎಲ್ಲವೂ ಉದಯಪುರದಲ್ಲಿದೆ. ಕೋಟೆಗಳು, ಅರಮನೆಗಳು, ಮ್ಯೂಸಿಯಂಗಳು, ಉದ್ಯಾನವನಗಳು, ಎಲ್ಲಕ್ಕಿಂತ ಹೆಚ್ಚಾಗಿ 12 ಸರೋವರಗಳು!

■ ಚಿತ್ರ– ಲೇಖನ: **ಗೀತಾ ಕುಂದಾಪುರ**



ರಾಜಸ್ತಾನ ಎಂದಾಗ ನೀರು, ಮರಗಳು ಇಲ್ಲದ ನಾಡು ಎಂಬ ಕಲ್ಪನೆ ಮೂಡುತ್ತದೆ. ರಾಜ್ಯದ ದಕ್ಷಿಣದಲ್ಲಿರುವ ಉದಯಪುರ ನೋಡಿದರೆ ಊಹೆ ತಲೆಕೆಳಗಾಗುವುದರಲ್ಲಿ ಸಂಶಯವಿಲ್ಲ. ಇಲ್ಲಿ ಎಲ್ಲೆಲ್ಲೂ ಮರ, ಗಿಡ, ಸರೋವರಗಳೇ. ಇದು ದೇಶದ ಸುಂದರ ನಗರಗಳಲ್ಲೊಂದು!

ರಾಜಸ್ತಾನ ಮತ್ತು ಗುಜರಾತ್‌ನ ಗಡಿಭಾಗದಲ್ಲಿರುವ ಉದಯಪುರಕ್ಕೆ 'ಸರೋವರಗಳ ನಗರ'ವೆಂಬ ಉಪನಾಮವೂ ಇದೆ. ಭೌಗೋಳಿಕವಾಗಿ ಇದು ಅರಾವಳಿ ಬೆಟ್ಟಗಳಿಂದ ಸುತ್ತುವರಿದಿದೆ. ಥಾರ್ ಮರುಭೂಮಿಯಿಂದ ಬೇರ್ಪಟ್ಟಿದೆ. ದೇಶದ ಇತರ ದೊಡ್ಡ ನಗರಗಳಿಗೆ ರೈಲು, ವಿಮಾನ ಮತ್ತು ಹೆದ್ದಾರಿಗಳ ಮೂಲಕ ಸಂಪರ್ಕ ಹೊಂದಿದೆ.

ಉದಯಪುರದಲ್ಲಿ ಪ್ರವಾಸಿಗಳನ್ನು ತಣಿಸಲು ಕೋಟೆಗಳು, ಅರಮನೆಗಳು, ಸಂಗ್ರಹಾಲಯಗಳು, ಉದ್ಯಾನಗಳು, ದೇವಾಲಯಗಳು, ಸರೋವರಗಳು ಇವೆ. ಸುತ್ತಮುತ್ತ 12 ಸರೋವರಗಳಿವೆ. ಫತೇಹ ಸಾಗರ, ಪಿಚೋಲ, ಸ್ವರೋಪ್ ಸಾಗರ, ರಂಗ್ ಸಾಗರ, ದೂಧ್ ತಲೈ ಮುಖ್ಯವಾದವುಗಳು. ಹೆಚ್ಚಿನ ಅರಮನೆಗಳೆಲ್ಲವೂ ಈಗ ವಿಶ್ವ ಪ್ರಸಿದ್ಧ ಹೊಟೇಲ್‌ಗಳಾಗಿವೆ.

ರಾಜಸ್ತಾನದ ಮೇವಾಡ ರಾಜರಿಗೆ ಚಿತ್ತೋರಗಢ ರಾಜಧಾನಿಯಾಗಿತ್ತು, ಮೊಘಲ್‌ರ ದಾಳಿಯಿಂದ ತಪ್ಪಿಸಿಕೊಳ್ಳಲು ಅರಾವಳಿ ಬೆಟ್ಟಗಳಿಂದ ಸುತ್ತುವರೆದ, ದುರ್ಗಮ ಜಾಗದಲ್ಲಿರುವ ಉದಯಪುರವನ್ನು ರಾಜಧಾನಿಗೆ ಆಯ್ದುಕೊಂಡಿದ್ದು ಪ್ರಸಿದ್ಧ ಮೇವಾಡದ ಮಹಾರಾಣಾ ಉದಯ ಸಿಂಘ್–11. ಉದಯಪುರದ ಸುತ್ತ ಸುಮಾರು 6 ಕಿಮೀ ಉದ್ದದ ಗೋಡೆ ಇದೆ. ಗೋಡೆಗೆ ಒಟ್ಟು ಏಳು ಬಾಗಿಲುಗಳಿವೆ.

ಸಿಟಿ ಪ್ಯಾಲೇಸ್: ಭಾರತದ ಅತೀ ದೊಡ್ಡ ಮತ್ತು ಸುಂದರ ಅರಮನೆಗಳಲ್ಲೊಂದು. ಈ ಅರಮನೆ ಸಂಕೀರ್ಣ 400 ವರ್ಷಗಳ ಕಾಲದಲ್ಲಿ ಹಲವು ಮೇವಾಡ ಅರಸರುಗಳಿಂದ ಕಟ್ಟಲ್ಪಟ್ಟಿದೆ. ಮೊಘಲ್ ಮತ್ತು ರಾಜಸ್ಥಾನಿ ವಾಸ್ತುಶಿಲ್ಪದ ಸುಂದರ ಸಮ್ಮಿಲನದ ಅರಮನೆ 'ಪಿಚೋಲ ಸರೋವರ'ದ ದಂಡೆಯ ಮೇಲಿದೆ. ಇದಕ್ಕೆ ಗ್ರಾನೈಟ್ ಮತ್ತು ಅಮೃತ ಶಿಲೆ ಬಳಸಲಾಗಿದೆ. ಒಳ ಆವರಣ ಬಣ್ಣದ ಗಾಜಿನ ಅಲಂಕಾರ, ಬೆಳ್ಳಿಯಿಂದ ಮಾಡಿದ ಕುಸುರಿ ಮತ್ತು ವರ್ಣಚಿತ್ರಗಳಿಂದ ಕೂಡಿದೆ.

ಅರಮನೆಯ ಸಂಕೀರ್ಣದಲ್ಲಿ ಹಲವು ಚಿಕ್ಕ ಅರಮನೆಗಳಲ್ಲದೆ, ದೇವಾಲಯಗಳು, ಅಂಗಳ, ಆವರಣ, ಛಾವಣಿಗಳು, ಈಜುಕೊಳ, ಉದ್ಯಾನಗಳಿವೆ. ಹಲವು